**(8) ಲೋಕಸೇವಾ ಆಯೋಗದವರು ಆಯ್ಕೆ ಮಾಡಿರುವ ಗೆಜೆಟೆಡ್ ಪ್ರೋಬೇಷನರ್ಸ್ ಹುದ್ದೆಗಳಿಗೆ ನೇಮಕ ಮಾಡುವುದು.**

**ಶ್ರೀ ಎಂ. ಮಹದೇವ್** : ಮಾನ್ಯ ಅಧ್ಯಕ್ಷರೇ 1985–86, 86–87ನೇ ಸಾಲಿನ ಕರ್ನಾಟಕ ಲೋಕ ಸೇವಾ ಆಯೋಗದಿಂದ ಆಯ್ಕೆಯಾಗಿರುವ ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳಿಗೆ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆ ನಡೆದು ಮೂರು ವರ್ಷ ಕಳೆದಿದ್ದು ಆಯ್ಕೆ ಪಟ್ಟಿ ಅದಿಕೃತವಾಗಿ ಪ್ರಕಟವಾಗಿ ಐದು ತಿಂಗಳಾಗಿದೆ. ಆದಾಗ್ಯೂ ಸಹ ಸರ್ಕಾರ ನೇಮಕಾತಿ ಕ್ರಮವನ್ನೇನೂ ಜರುಗಿಸಿಲ್ಲ. ಅಭ್ಯರ್ಥಿಗಳು ಬಡ ಕುಟುಂಬದಿಂದ ಬಂದಿದ್ದು ಬಹಳ ಸಂಕಷ್ಟದಲ್ಲಿದ್ದಾರೆ. ಈ ವಿಚಾರದಲ್ಲಿ ಸರ್ಕಾರದ ಸ್ಪಷ್ಟನೆಯನ್ನು ತಿಳಿಯಬಯಸುತ್ತೇನೆ.

**ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ, ಸಂಸದೀಯ ವ್ಯವಹಾರಗಳ ಮಂತ್ರಿ)**: ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಈ ಕೆಳಗಿನ ಹೇಳಿಕೆಯನ್ನು ಕೊಡಲು ಇಷ್ಟಪಡುತ್ತೇನೆ.

1986 ಮತ್ತು 1987ನೇ ವರ್ಷಗಳಿಗೆ ಸಂಬಂಧಿಸಿದಂತೆ, ಗೆಜೆಟೆಡ್ ಪ್ರೋಬೇಷನರ್ಸ್ ಆಯ್ಕೆಯಲ್ಲಿ 232 ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಕರ್ನಾಟಕ ಲೋಕ ಸೇವಾ ಆಯೋಗ ಜುಲೈ 90ರಲ್ಲಿ ಆಯ್ಕೆ ಪಟ್ಟಿಯನ್ನು ಸರ್ಕಾರಕ್ಕೆ ಒದಗಿಸಿತು. ಈ ಪಟ್ಟಿಯಲ್ಲಿ ವಿವಿಧ ಇಲಾಖೆಗಳಲ್ಲಿರುವ ವಿವಿಧ ವರ್ಗಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳು ಇರುತ್ತಾರೆ.

ಪ್ರಸ್ತುತದಲ್ಲಿ ಮಿತವ್ಯಯ ಆದೇಶಗಳು ಜಾರಿಯಲ್ಲಿರುವುದರಿಂದ ಇವುಗಳನ್ನು ಸಡಿಲಿಸುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ. ಹೀಗೆ ಮಾಡುವಾಗ ಇದೇ ರೀತಿಯ ಬೇರೆ ಆಯ್ಕೆ ಪಟ್ಟಿಗಳೇನಾದರೂ ಆಯೋಗ ಕೊಟ್ಟಿದೆಯೇ ಎನ್ನುವ ಅಂಶವನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ.

ಇನ್ನೊಂದು ಅಂಶವೇನೆಂದರೆ, ಈ ಆಯ್ಕೆ ಪಟ್ಟಿಯ ವಿಷಯದಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಕೆಲವಷ್ಟು ಅರ್ಜಿಗಳಿದ್ದು ಅವುಗಳಲ್ಲಿ ನ್ಯಾಯ ಮಂಡಳಿ ಆ ಅರ್ಜಿದಾರರನ್ನು ಸಹ ಪರಿಗಣಿಸಲು ಸೂಚಿಸಿದೆ.

ಈ ಹಿನ್ನೆಲೆಯಲ್ಲಿ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

**(9) ಉಡುಪಿ: ಮಲ್ಪೆ ಪ್ರಾಧಿಕಾರದ ಕಾರ್ಯಚರಣೆಗಳು**

**ಶ್ರೀಮತಿ ಮನೋರಮ ಮದ್ವರಾಜ್** : ಮಾನ್ಯ ಅಧ್ಯಕ್ಷರೆ, ಉಡುಪಿ–ಮಲ್ಪೆ ಪ್ರಾಧಿಕಾರ ಇದೊಂದು ಪ್ರಾರಬ್ಧದ ಅವಾಂತರದ ಅಧಿಕಾರ ವ್ಯವಸ್ಥೆ ಆಗಿದೆ. ಜನ ಪ್ರತಿನಿಧಿಗಳ ಅಭಿಪ್ರಾಯಪಡೆಯದೆ ತಯಾರಿಸಿದ ಪ್ರಾಧಿಕಾರದ ನೀಲಿನಕ್ಷೆ ಬರೇ ಅಧಿಕಾರಿಗಳ ನಿರ್ಧಾರವಾಗಿದೆ. ಮನಬಂದಂತೆ ಕೈಗಾರಿಕಾವಲಯ, ಹಸಿರು ವಲಯ ಎಂದು ಗುರುತಿಸಲಾಗಿದೆ. ಜನನಿಬಿಡ, ವಾಸದ ಜಾಗಗಳಲ್ಲಿ ಕೈಗಾರಿಕಾ ವಲಯ, ನಮೂದಿಸಿ, ಪ್ರಭಾವಶಾಲಿಗಳು ಮತ್ತು ಕೆಲಸ ಮಾಡಿಕೊಳ್ಳುವ ಮರ್ಮ ಗೊತ್ತಿರುವವರು ಮಾತ್ರ ಪ್ರಯೋಜನ ಪಡೆಯುವಂತಾಗಿದೆ ಎಂದು ಜನ ದೂರುತ್ತಿದ್ದಾರೆ. ಉಡುಪಿ ಪುರಸಭೆ ಮಾತ್ರವಲ್ಲದೆ, ಮಲ್ಪೆ, ಶಿವಳ್ಳಿ, ಉದ್ಯಾವರ, ಪುತ್ತೂರು, ಇತ್ಯಾದಿ ಮಂಡಲ ಪಂಚಾಯತ್ ಕ್ಷೇತ್ರಗಳಲ್ಲಿ ಸಹಾ ಈ ಪ್ರಾಧಿಕಾರದ ವ್ಯಾಪ್ತಿ ಇದ್ದು, ಗ್ರಾಮೀಣ ಪ್ರದೇಶಕ್ಕೂ ತೊಂದರೆ ಆಗಿದೆ. ಮಂಡಲ, ಪುರಸಭೆ, ಪ್ರಾಧಿಕಾರ – ಹೀಗೆ ವಿವಿಧ ಮೂಲಗಳಿಂದ ತೊಂದರೆ ಆಗುವ ಬದಲು ಜನರು ಮಂಡಲಗಳಲ್ಲಿ ಅಥವಾ ಪುರಸಭೆಯಲ್ಲಿ ಒಂದೇ ಕಡೆ ತಮ್ಮ ಕೆಲಸ ಮಾಡಿಕೊಳ್ಳುವ ಏಕ ಕೆಂಡಿ ವ್ಯವಸ್ಥೆ ಆಗಬೇಕು. ಈ ಕುರಿತಾದ ಯೋಜನೆ ಬಹಿರಂಗವಾಗಿ ತಿಳಿಸಲ್ಪಡಬೇಕು. ಉಪದ್ರವಕಾರಿ ವ್ಯವಸ್ಥೆಗಳನ್ನು ವಿಸರ್ಜಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ,

ಕರ್ನಾಟಕ ನಗರ ಗ್ರಾಮ ಯೋಜನಾ ಅಧಿ ನಿಯಮದಡಿ ಉಡುಪಿ–ಮಲ್ಪೆ ಪ್ರಾಧಿಕಾರವನ್ನು 1977 ರಲ್ಲಿ ರಚಿಸಲಾಗಿದೆ. ಈ ಯೋಜನಾ ಪ್ರಾಧಿಕಾರ, ಉಡುಪಿ–ಮಲ್ಪೆ ಸ್ಥೂಲಾಭಿವೃದ್ಧಿ ಯೋಜನೆಯನ್ನು 1983 ರಲ್ಲಿ ಸಿದ್ಧಪಡಿಸಿದ್ದು, ಈ ಯೋಜನೆ 83 ರಿಂದ ಜಾರಿಯಲ್ಲಿದೆ. ಉಡುಪಿ–ಮಲ್ಪೆ ಸ್ಥಳೀಯ ಯೋಜನಾ ಕ್ಷೇತ್ರದಲ್ಲಿ ಉಡುಪಿ, ಮಲ್ಪೆ ಮತ್ತು ಮಣಿಪಾಲ್ ಪಟ್ಟಣಗಳು, ತೋನ್ಸೆ ಶಿವಳ್ಳಿ, ಹಾಗೂ ಸುತ್ತಲ 15 ಗ್ರಾಮಗಳು ಸೇರಿದ್ದು ಇದರ ಕ್ಷೇತ್ರ 127.36 ಚ.ಕಿ.ಮೀ. ಇದೆ.

ಉಡುಪಿ–ಮಲ್ಪೆ ಯೋಜನಾ ಪ್ರಾಧಿಕಾರದ ರಚನೆಯಲ್ಲಿ ಪುರಸಭೆ ಹಾಗೂ ಸಾರ್ವಜನಿಕ ಪ್ರತಿನಿಧಿಗಳು ಸದಸ್ಯರಾಗಿರಲು ಅವಕಾಶವಿದೆ. ಸ್ಥೂಲಾಭಿವೃದ್ಧಿ ಯೋಜನೆಯನ್ನು ಸರ್ಕಾರ ಅಂಗಿಕರಿಸುವ ಮೊದಲು ಯೋಜನಾ ಪ್ರಾಧಿಕಾರ ಪರಿಶೀಲಿಸಬೇಕಾಗಿದ್ದು, ಈ ಯೋಜನಾ ಪರಿಷ್ಕರಣೆಯಲ್ಲಿ ಸಾರ್ವಜನಿಕ ಪ್ರತಿನಿಧಿಗಳ ಪಾತ್ರ ಇದೆ. ಜೊತೆಗೆ, ಸರ್ಕಾರ ಯೋಜನೆಗೆ ಅಂತಿಮ ಅಂಗೀಕಾರ ನೀಡುವ ಮೊದಲು ತಾತ್ಕಾಲಿಕ ಅಂಗೀಕಾರ ನೀಡಿ, ಸಾರ್ವಜನಿಕ ಆಕ್ಷೇಪ ಮತ್ತು ಸಲಹೆಗಳಿಗೆ ಒಂದು ತಿಂಗಳಕಾಲಾವಕಾಶ ನೀಡಿ ಸ್ಥಳೀಯ ಪತ್ರಿಕೆಗಳಲ್ಲಿ ಯೋಜನಾ ಅಂಗೀಕಾರವನ್ನು ಪ್ರಕಟಿಸುತ್ತದೆ. ಯೋಜನಾ ಪ್ರಾಧಿಕಾರ ಸಾರ್ವಜನಿಕರ ಸಲಹೆ ಮತ್ತು ಆಕ್ಷೇಪಗಳನ್ನು ಪರಿಶೀಲಿಸಿ, ಅಗತ್ಯವಾದಲ್ಲಿ ಯೋಜಯನ್ನು ಮಾರ್ಪಡಿಸಿ, ಸರ್ಕಾರಕ್ಕೆ ಸಲ್ಲಿಸುತ್ತದೆ. ಈ ಹಿನ್ನಲೆಯೊಡನೆ ಸರ್ಕಾರ ಯೋಜನೆಗೆ ಅಂತಿಮ ಅಂಗೀಕಾರ ನೀಡುತ್ತದೆ.

ನಗರ ಪಟ್ಟಣಗಳ ಅಭಿವೃದ್ಧಿ ಯೋಜನೆಗಳ ಅಂಗೀಕಾರದಲ್ಲಿ ರಾಜ್ಯ ಸರ್ಕಾರವು ಮೇಲೆ ತಿಳಿಸಿದ ಕಾರ್ಯ ವಿಧಾನಗಳನ್ನು ಅನುಸರಿಸುವುದರಿಂದ ಅಭಿವೃದ್ಧಿ ಯೋಜನೆಗಳ ನೀಲಿ ನಕ್ಷೆಗಳು ಅಧಿಕಾರಿಗಳ ನಿರ್ಧಾರಗಳ ಮೇಲೆ ಸಿದ್ಧಪಡಿಸಿದುವುಗಳೆಂದು ತೀರ್ಮಾನಿಸುವುದು ಸರಿಯಾಗಲಾರದು.

ಪ್ರಸ್ತುತ, ಉಡುಪಿ–ಮಲ್ಪೆ ವ್ಯಾಪಕಾಭಿವೃದ್ಧಿ ಯೋಜನೆಯನ್ನು, ಕರ್ನಾಟಕ ಗ್ರಾಮ ಯೋಜನಾ ಅಧಿನಿಯಮ ಪ್ರಕರಣ 19ರ ಅಡಿ ಯೋಜನಾ ಪ್ರಾಧಿಕಾರ ಸಲ್ಲಿಸಿದ್ದು, ಈ ಯೋಜನೆಯನ್ನು ನಗರ ಯೋಜನಾ ನಿರ್ದೇಶಕರು ಪರಿಶೀಲಿಸಿ, ಸರ್ಕಾರದ ತಾತ್ಕಾಲಿಕ ಅಂಗೀಕಾರಕ್ಕಾಗಿ ಸರ್ಕಾರಕ್ಕೆ ಕಳುಹಿಸಿದ್ದಾರೆ, ತಾತ್ಕಾಲಿಕ ಅಂಗೀಕಾರವನ್ನು ಸರ್ಕಾರ ನೀಡಿದ ನಂತರ ಈ ಯೋಜನೆಯನ್ನು ಯೋಜನಾ ಪ್ರಾಧಿಕಾರಕ್ಕೆ ಕಳುಹಿಸಿಕೊಡಲಾಗುವುದು. ಯೋಜನಾ ಪ್ರಾಧಿಕಾರ ಸಾರ್ವಜನಿಕ ಸಲಹೆ ಮತ್ತು ಆಕ್ಷೇಪಗಳನ್ನು 3 ತಿಂಗಳ ಅವಧಿಯೊಳಗೆ ನೀಡುವಂತೆ ಕೋರಿ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಣೆ ನೀಡುವುದು. ಸ್ಥೂಲಾಭಿವೃದ್ಧಿ ಯೋಜನಾ ಅಂಗೀಕಾರದಲ್ಲಿ ಅನುಸರಿಸಿದಂತೆ ಕಾರ್ಯವಿಧಾನವು ವ್ಯಾಪಕಾಬಿವೃದ್ಧಿ ಯೋಜನೆಗೂ ಅನ್ವಯವಾಗುತ್ತದೆ.

ಈ ಕಾರಣಗಳಿಂದ ಪ್ರತಿ ಹಂತದಲ್ಲೂ ಸಾರ್ವಜನಿಕ ಪಾತ್ರ ಹಾಗೂ ಸಹಭಾಗತ್ವ ಇರುವುದರಿಂದ ಸಿದ್ಧಪಡಿಸಿರುವ ಯೋಜನೆಗಳು ಹಾಗೂ ನೀಲಿ ನಕ್ಷೆಗಳು ಅಧಿಕಾರಿಗಳ ನಿರ್ಧಾರಗಳಲ್ಲ.

ಪ್ರಶ್ನೆಯಲ್ಲಿ ಮಂಡಲ ಪಂಚಾಯತಿಗಳು, ಪುರಸಭೆಗಳು ಹಾಗೂ ಯೋಜನಾ ಪ್ರಾಧಿಕಾರ ಒಳಗೊಂಡಂತೆ 'ಏಕ ಕಿಂಡಿ' ವ್ಯವಸ್ಥೆ ಯೋಜಿಸುವಂತೆ ಸಲಹೆ ನೀಡಲಾಗಿದೆ. ಈ ಎಲ್ಲಾ ಪ್ರಾಧಿಕಾರಗಳು ಬೇರೆ ಬೇರೆ ಕಾನೂನುಗಳಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಯಾವುದೇ ಒಂದು ಪ್ರಾಧಿಕಾರಕ್ಕೂ ಎಲ್ಲಾ ಕಾನೂನುಗಳ ಅಧಿಕಾರಗಳನ್ನು ನೀಡಲು ಅವಕಾಶವಿರುವುದಿಲ್ಲ ಹಾಗಾಗಿ ಈ 'ಏಕ ಕಿಂಡಿ' ವ್ಯವಸ್ಥೆಯ ಕಲ್ಪನೆ ಸಾಧ್ಯವಾಗಲಾರದು.

ಯೋಜನಾ ಪ್ರಾಧಿಕಾರ ವ್ಯಾಪ್ತಿಯಲ್ಲಿ ಅಭಿವೃದ್ಧಿಗಳನ್ನು ಕೈಗೊಳ್ಳಲು ಇಚ್ಛೆಪಡುವವರು ಯೋಜನಾ ಪಾರಧಿಕಾರದಿಂದ ಅಭಿವೃದ್ಧಿಗಳಿಗೆ (ಕಟ್ಟಡಗಳು ಹಾಗೂ ಭೂ–ಉಪ–ವಿಭಾಗಗಳಿಗೆ) ಯೋಜನಾ ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರ ಪಡೆಯುವುದು ನಿಯಮಬದ್ಧ.